


## ರೆಕ್ಕೆಯ ರಿಸಿಗಳು

ಕುವೆಂಪು ಅವರು ಪಕ್ಷಿ ಸಂಕುಲದ ವಿವಿಧ ಕಲರವ, ಮಧುರ ಧ್ವನಿ, ಕುಕಿಲು, ಗಳಪು, ಕೂಗನ್ನು ಬಾಲ್ಯದಿಂದ ಕಿವಿದುಂಬಿಕೊಂಡು ಅದನ್ನು ಅನುಕರಿಸಿ ಆನಂದಪಟ್ಟವರು. ಹಕ್ಕಿಗಳ ವಿವಿಧ ಬಣ್ಣಗಳ ಮೋಹಕ ರಚನೆ, ಬೆಡಗು ಬಿನ್ನಾಣವನ್ನು ಕಣ್ದುಂಬಿಕೊಂಡವರು. ಅವರು ವಿದ್ಯಾವಂತರಾದಂತೆ, ಸಾಮವೇದದ ಮಂತ್ರಗಳ ಹಾಡುವಿಕೆ ಕೇಳಿದವರು. ಅವರಿಗೆ ಸಮೂಹದಲ್ಲಿ ಏಕಕಂಠದಂತೆ ಮೊಳಗಿದ ಋುಕ್ಕುಗಳ ಗಾಯನ ಪಕ್ಷಿಗಳ ಗುಂಪಿನಿಂದ ಹೊಮ್ಮುವ ನಾದವಾಗಿ ಕೇಳಿಸಿದೆ. ಅದಕ್ಕಾಗಿ ಅವರು ಪಕ್ಷಿಗಳನ್ನು 'ರೆಕ್ಕೆಯ ರಿಸಿಗಳು' ಎಂದು ಕರೆದರು. ಅದನ್ನು ಹೀಗೆ ಕಾವ್ಯದಲ್ಲಿ ಅಭಿವ್ಯಕ್ತಿಸಿದರು.

'ಹೊಂಬಿಸಿಲಪ್ಪಿಹ ಬನ ಬನದಲ್ಲಿ  
ನನೆಕೊನೆಯೇರಿಹ ಮರ ಮರದಲ್ಲಿ  
ರೆಕ್ಕೆಯ ರಿಸಿಗಳು ಮುದವನು ತಾಳಿ  
ಸಾಮಗಾನದಲಿ ಕರೆವರು ಕೇಳಿ!'  
(ಅರುಣಗೀತೆ : ನವಿಲು)

## ಯಂತ್ರರ್ಷಿ

ಋುಷಿಯೆಂದರೆ ತಪಸ್ವಿ; ಮುನಿ. ಮಹಾಮುನಿ, ಶಾಂತಮುನಿ, ಮೌನಮುನಿ, ಮಂತ್ರರ್ಷಿ ಜನಗಳು ತಿಳಿದಿರುವ ಮುನಿಗಳು. ಕುವೆಂಪು ಅವರು 'ಹಿಂದಿನಾ ಋುಷಿಗಳೂ ಮಾನವರೆ ನಮ್ಮಂತೆ' ಎಂಬ ತಿಳಿವಿನಲ್ಲಿ ನಮ್ಮ ಕಾಲದ ಯಂತ್ರ ನಾಗರಿಕತೆಯ ಹಿನ್ನಲೆಯಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರನ್ನು 'ಯಂತ್ರರ್ಷಿ' ಎಂದು ಕರೆದಿದ್ದಾರೆ. ಅದು ಅವರು ಟಂಕಿಸಿರುವ ಪದ. ವಿಶ್ವೇಶ್ವರಯ್ಯನವರು ಪರಿಣತ ಎಂಜಿನಿಯರು; ಯಂತ್ರಗಳನ್ನು ರಚಿಸುವ ಯಂತ್ರಶಿಲ್ಪಜ್ಞ. ಅವರು ಪುಣೆಯ ಖಡಕಾವಾಸ್ಲಾ ಮತ್ತು ಮೈಸೂರಿನ ಕೆ.ಆರ್.ಎಸ್. ಜಲಾಶಯಗಳಿಗೆ ಅಳವಡಿಸಿರುವ ಸ್ವಯಂಚಾಲಿತ ಗೇಟ್‌ಗಳು ಇಂದಿಗೂ ಸುಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಕುವೆಂಪು ಅವರು ಸರ್ ಎಂ.ವಿ. ಅವರನ್ನು ಕಾವ್ಯದಲ್ಲಿ ಹೀಗೆ ಚಿತ್ರಿಸಿದ್ದಾರೆ.

ಹೇ ಪುಣ್ಯ ಯಂತ್ರರ್ಷಿ, ನೀನೆಮ್ಮ ವಿಜಿಗೀಷು  
ಮತಿಗೆ ಪ್ರತಿನಿಧಿಯಾಗಿ ನಿಂತಿರುವೆ.